೧) ಹರಿಜನ, ಗಿರಿಜನ ಹಾಗೂ ಇತರರಿಗೆ ಈ ಕೆಳಕಂಡಂತೆ ಹಂಚಲಾಗಿದೆ.

ಸಾಲು	ನಿವೇಶನ			
	ಹರಿಜನ	ಗಿರಿಜನ	ಇತರೆ	ಒಟ್ಟು
೧೯೮೫–೮೪	೩೬,೨೧೪	೩೦೮	೪೭,೧೮೧	೮೩,೬೯೩
೧೯೮೪–೮೫	೨೪,೭೫೭	೩೧೧೦	೫೧,೭೫೯	೭೯,೬೦೬
೧೯೮೫–೮೬	೨೦,೨೪೯	೪೭೭೨	೨೦,೯೬೫	೪೫,೯೮೬
೧೯೮೬–೮೭	೨೩,೭೩೭	೭೧೫೧	೧೯,೩೧೫	೪೫,೨೦೩

ಮನೆಗಳು

ವರ್ಷ	ಹರಿಜನ–ಗಿರಿಜನ	ಇತರೆ	ಒಟ್ಟು
೧೯೮೩–೮೪	೪೪೩೦	೮೫೭೦	೧೩,೦೦೦
೧೯೮೪–೮೫	೮೯೨೨	೧೧೦೧೬	೧೯,೯೩೮
೧೯೮೫–೮೬	೭೬೭೨	೧೮೬೨೩	೨೬,೨೮೫
೧೯೮೬–೮೭	೭೮೫೫	೧೫೧೫೦	೨೩,೦೦೫

ಹುಡ್ಕೋ ಯೋಜನೆ

೧೯೮೩–೮೪	೧೯,೨೫೯	೨೫,೭೪೧	೪೫,೦೦೦
೧೯೮೪–೮೫	೨೪,೯೫೭	೩೦,೨೬೮	೫೫,೨೨೫
೧೯೮೫–೮೬	೧೭,೯೮೪	೩೬,೨೪೧	೫೫,೨೨೫
೧೯೮೬–೮೭	೧೭,೦೧೬	೩೨,೯೮೪	೫೦,೦೦೦

ಜಿಲ್ಲಾ ಪರಿಷತ್ತಿಗೆ ವಹಿಸಿರುವ ಕಟ್ಟಡ ಹಾಗೂ ರಸ್ತೆ ದುರಸ್ತಿ.

೫೦೪. ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಭಿವೃದ್ಧಿ ಹಾಗೂ ಯೋಜನೆ ಅನುಸಾರವಾಗಿ ಜಿಲ್ಲಾ ಪರಿಷತ್ತುಗಳಿಗೆ ಪ್ರತಿ ಇಲಾಖೆಗಳ ಕಟ್ಟಡಗಳ ಪೂರ್ಣ ನಿರ್ಮಾಣ, ದುರಸ್ತಿ ಹಾಗೂ ನಿರ್ವಹಣೆ ಬಗ್ಗೆ ೧೯೮೬–೮೭ ಸಾಲಿಗೆ ಪ್ರತಿ ಇಲಾಖಾವಾರು ಮಂಜೂರು ಮಾಡಿ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದ ಹಣದಲ್ಲಿ ಕೊಡಗು ಜಿಲ್ಲೆಗೆ ಬಿಡುಗಡೆ ಮಾಡಿದ ಒಟ್ಟು ಹಣವೆಷ್ಟು ?

ಆ) ಕಟ್ಟಡಗಳ ದುರಸ್ತಿ ಇತ್ಯಾದಿಗಳಿಗೆ ಹಣ ಬಿಡುಗಡೆ ಮಾಡುವಾಗ ಯಾರಿಂದ ಪೂರ್ಣ ಮಾಹಿತಿ ಪಡೆದು ಬಿಡುಗಡೆ ಮಾಡಲಾಗಿದೆ ?

ಇ) ೧೯೮೬–೮೭ನೇ ಸಾಲಿನಲ್ಲಿ ಕಟ್ಟಡಗಳ ದುರಸ್ತಿಗೆ ಎಲ್ಲಾ ಇಲಾಖೆಗೆ ಕೇವಲ ರೂ. ೪೦,೦೦೦ (ನಲವತ್ತು ಸಾವಿರ) ಗಳಿಂದ ಜಿಲ್ಲೆಗೆ ಮಂಜೂರು ಮಾಡಿರುವುದು ಸರಿಯೇ ?

ಈ) ಕಟ್ಟಡ ಹಾಗೂ ರಸ್ತೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸುವಾಗ ಅದನ್ನು ಪೂರ್ಣ ಮಾಡುವ ದುರಸ್ತಿಗಾಗಿ ಹಾಗೂ ನಿರ್ವಹಣೆ ಬಗ್ಗೆ ಹಣ ಬಿಡಂಗಡೆ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು),—

ಅ) ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಿದ್ದು ೧೯೮೭-೮೮ನೇ ಸಾಲಿನಲ್ಲಿ ಆದ್ದರಿಂದ ೧೯೮೬-೮೭ನೇ ಸಾಲಿನಲ್ಲಿ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) "ಅ"ನಲ್ಲಿ ತಿಳಿಸಿರುವ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಜಿಲ್ಲಾ ಪರಿಷತ್ತ್‌ಗಳು ಆಸ್ತಿಯನ್ನು ವಶಕ್ಕೆ ತೆಗೆದುಕೊಂಡ ನಂತರ, ಅವುಗಳ ನಿರ್ವಹಣೆಗೆ ಹಣವನ್ನು ಆಯಾ ಕಾರ್ಯಕ್ರಮದಲ್ಲಿ ಹಂಚಲಾಗಿದೆ.

ಜಿಲ್ಲಾ ಪರಿಷತ್ತುಗಳ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದು:

೧೨೭. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ೧೯೮೭-೮೮ನೇ ಸಾಲಿನ ನವಂಬರ್ ಅಂತ್ಯದವರೆಗೂ ಸರ್ಕಾರದವರು ಯೋಜನೆ ಮತ್ತು ಯೋಜನೇತರ ಉದ್ದೇಶಗಳಿಗಾಗಿ ನೀಡಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಸದರಿ ಹಣದಲ್ಲಿ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳು ಖರ್ಚು ಮಾಡಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿಗಳನ್ನೊದಗಿಸುವುದು)

ಇ) ಜಿಲ್ಲಾಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸರಿಯಾಗಿ ಹಣ ವಿತರಣೆಯಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ವಿವರಣೆಯನ್ನು "ಅ" ಪಟ್ಟಿಯಲ್ಲಿ ಒದಗಿಸಲಾಗಿದೆ.

ಆ) ವಿವರಣೆಯನ್ನು "ಆ" ಪಟ್ಟಿಯಲ್ಲಿ ಒದಗಿಸಲಾಗಿದೆ.

ಇ) ಇಲ್ಲ.

ಈ) (ಇ)ನಲ್ಲಿ ಉತ್ತರಿಸುವುದರಿಂದ ಉದ್ಭವವಾಗುವುದಿಲ್ಲ.